## ಭೂಮಾತೆಗೆ ಶುಭ ಕೋರುವುದು

ಪ್ರಧಾನ ಪರಮಾತ್ಮನಿಗೆ, ದೈವಿಕ ತಂದೆ, ದೈವಿಕ ತಾಯಿ,
ನನ್ನ ಉನ್ನತ ಆತ್ಮನಿಗೆ, ನನ್ನ ಆಧ್ಯಾತ್ಮಿಕ
ಮಾರ್ಗದರ್ಶಕರಿಗೆ, ಸಹಾಯಕರಿಗೆ ಹಾಗೂ ಶಿಕ್ಷಕರಿಗೆ
ಎಲ್ಲಾ ಆಧ್ಯಾತ್ಮಿಕ ಮಾರ್ಗದರ್ಶಕರಿಗೆ, ಸಹಾಯಕರಿಗೆ
ಹಾಗೂ ಶಿಕ್ಷಕರಿಗೆ, ಎಲ್ಲಾ ಚಿಕಿತ್ಸಾ ದೇವತೆಗಳಿಗೆ,
ಭೂಮಾತೆಯ ಸಂರಕ್ಷಕರಿಗೆ, ಮಹಾ ಕರ್ಮ ಮಂಡಲಕ್ಕೆ,

ಪರಮಾತ್ಮನೇ ನನ್ನನ್ನು ಭೂಮಿಯ ಮೇಲೆ
ದೈವದ ಒಂದು ಸಾಧನವಾಗಿ ಪರಿವರ್ತಿಸಬೇಕಾಗಿ
ವಿನಯದಿಂದ ಪ್ರಾರ್ಥಿಸುತ್ತೇನೆ.

ದಯವಿಟ್ಟು ಅದಕ್ಕಾಗಿ ನನಗೆ ಮಾರ್ಗದರ್ಶನ ನೀಡಿ ರಕ್ಷಿಸಿ.

ನಾನು ನಾನೇ ಆಗಿದ್ದೇನೆ.

ಭೂಮಾತೆಯಲ್ಲಿ ದೈವಿಕ ಜ್ಯೋತಿ, ದೈವಿಕ ಶಕ್ತಿ,
ದೈವಿಕ ಜ್ಞಾನ ಇರಲಿ.

ಭೂತಾಯಿಯ ಒಗ್ಗಟ್ಟನ್ನು ತಡೆಯುವ ಎಲ್ಲಾ ನಕಾರಾತ್ಮಕ
ಶಕ್ತಿಗಳನ್ನು ದೈವಿಕ ಜ್ವಾಲೆಯು ಸುಟ್ಟು ಭಸ್ಮಮಾಡಲಿ.
ಭೂತಾಯಿಯಲ್ಲಿ ಶಾಂತಿ ಹಾಗೂ ಸಾಮರಸ್ಯ ನೆಲೆಸಲಿ.

ಭೂಮಾತೆಯಲ್ಲಿ ಹೇರಳವಾಗಿ ಆಹಾರ, ನೀರು,
ಹಾಗೂ ಸಂಪತ್ತು ತುಂಬಿರಲಿ. ಭೂಮಾತೆಯು
ಯೌವ್ವನ, ನವೋತ್ಸಾಹ ಪಡೆಯಲಿ.

ಎಲ್ಲಾ ಜೀವಿಗಳಲ್ಲಿಯೂ ಹೇರಳವಾಗಿ ಪ್ರೀತಿ, ಕರುಣೆ,
ದಯಾಳುತ್ವ, ಸಂತೋಷ ಹಾಗೂ ಆಧ್ಯಾತ್ಮಿಕತೆ ತುಂಬಿರಲಿ.

ಭೂಮಾತೆಯ ಮೇಲೆ ದೈವದ ಜ್ವಾಲೆಯನ್ನು
ಸಂರಕ್ಷಿಸುತ್ತಿರುವವರು ದೈವಿಕ ಜ್ಯೋತಿ, ದೈವಿಕ ಶಕ್ತಿ,
ದೈವಿಕ ಜ್ಞಾನದಿಂದ ಆಶೀರ್ವದಿಸಲ್ಪಡಲಿ.

ಪರಮಾತ್ಮನೆ ದಯವಿಟ್ಟು ಎಲ್ಲರ ಭಯ ಹಾಗೂ
ಸಂದೇಹಗಳನ್ನು ನಿವಾರಿಸಿ ಒಗ್ಗಟ್ಟಾಗಿರುವಂತೆ
ಮಾಡಿರಿ.
ಪರಮಾತ್ಮನೆ ವಂದನೆ, ವಂದನೆ, ವಂದನೆ.

Copyright © All rights reserved


## ದೇವಾಲಯಗಳಿಗೆ ಶುಭ ಕೋರುವುದು

ಪ್ರಧಾನ ಪರಮಾತ್ಮನಿಗೆ, ದೈವಿಕ ತಂದೆ, ದೈವಿಕ ತಾಯಿ,
ನನ್ನ ಉನ್ನತ ಆತ್ಮನಿಗೆ, ನನ್ನ ಅಧ್ಯಾತ್ಮಿಕ ಮಾರ್ಗದರ್ಶಕರಿಗೆ,
ಸಹಾಯಕರಿಗೆ ಹಾಗೂ ಶಿಕ್ಷಕರಿಗೆ, ಎಲ್ಲಾ ಆಧ್ಯಾತ್ಮಿಕ
ಮಾರ್ಗದರ್ಶಕರಿಗೆ ಸಹಾಯಕರಿಗೆ ಹಾಗೂ ಶಿಕ್ಷಕರಿಗೆ,
ಎಲ್ಲಾ ಚಿಕಿತ್ಸಾ ದೇವತೆಗಳಿಗೆ ಮತ್ತು ದೈವಿಕ ಜೀವಿಗಳಿಗೆ,
ಮಹಾ ಕರ್ಮ ಮಂಡಲಕ್ಕೆ.

ಪರಮಾತ್ಮನೇ ನನ್ನನ್ನು ಈ ಸ್ಥಳದಲ್ಲಿ ದೈವದ ಒಂದು
ಸಾಧನವಾಗಿ ಪರಿವರ್ತಿಸಬೇಕಾಗಿ ವಿನಯದಿಂದ ಪ್ರಾರ್ಥಿಸುತ್ತೇನೆ.

ದಯವಿಟ್ಟು ಅದಕ್ಕಾಗಿ ನನಗೆ ಮಾರ್ಗದರ್ಶನ ನೀಡಿ ರಕ್ಷಿಸಿ.
ನಾನು ನಾನೇ ಆಗಿದ್ದೇನೆ.

ಹೇರಳವಾದ ದೈವಿಕ ಪ್ರಕಾಶವು ಈ ಸ್ಥಳದಲ್ಲಿ ತುಂಬಿರಲಿ.
ಆ ದೈವಿಕ ಪ್ರಾಕಾಶವು ದೈವಿಕ ಅಗ್ನಿಯಾಗಿ ಪರಿವರ್ತನೆಗೊಂಡು
ಎಲ್ಲಾ ನಕಾರಾತ್ಮಕ ಶಕ್ತಿಗಳನ್ನೂ ದಹಿಸಿ ಬೆಳಕನ್ನಾಗಿ ಪರಿವರ್ತಿಸಲಿ.
ಈ ದೈವಿಕ ಅಗ್ನಿಯು, ಈ ಸ್ಥಳದ ಮೂಲೆಮೂಲೆಗೂ ಹರಿಯಲಿ.
ಈ ಸ್ಥಳದಲ್ಲಿ ಅಗ್ನಿ, ಅಗ್ನಿ, ಅಗ್ನಿ, ಕೇವಲ ದೈವಿಕ ಅಗ್ನಿಯೇ ಇರಲಿ.

ಈ ಸ್ಥಳವು ಹೇರಳವಾದ ದೈವಿಕ ಪ್ರೀತಿ, ದೈವಿಕ ದಯಾಳುತ್ವ,
ದೈವಿಕ ಕರುಣೆ, ಹೇರಳವಾದ ಚಿಕಿತ್ಸಾಕಾರಕ ಶಕ್ತಿ, ಸಂಮೃದ್ಧಿ,
ಹೇರಳವಾದ ಸಂತೋಷ, ದೈವಿಕ ಸಾಮರಸ್ಯ, ಆಧ್ಯಾತ್ಮಿಕತೆ ಹಾಗೂ
ದೈವಿಕ ಆನಂದ ಮುಂತಾದವುಗಳಿಂದ ಆಶೀರ್ವದಿಸಲ್ಪಡಲಿ.

ದಯವಿಟ್ಟು ಎಲ್ಲರ ಭಯ ಹಾಗೂ ಸಂದೇಹಗಳನ್ನು ನಿವಾರಿಸಿರಿ.
ಇಲ್ಲಿ ಚಿಕಿತ್ಸೆಗಾಗಿ ಬರುವ ಎಲ್ಲರೂ ಗುಣಹೊಂದಲಿ.

ಎಲ್ಲರೂ ದೈವಿಕ ಜ್ಞಾನ ಹಾಗೂ ವಿವೇಕವನ್ನು ಪಡೆಯಲಿ.
ದು:ಖಗಳು ಸಂತೋಷಗಳಾಗಿ ಪರಿವರ್ತನೆಯಾಗಲಿ.
ಎಲ್ಲರೂ ಸುಖ ಸಂಪತ್ತುಗಳನ್ನು ಪಡೆಯಲಿ. ಎಲ್ಲರೂ
ಹಂಚಿಕೊಳ್ಳಲು ಹಾಗೂ ಕೊಡಲು ಇಚ್ಛಿಸಲಿ, ಎಲ್ಲರಲ್ಲೂ
ಒಗ್ಗಟ್ಟು ನೆಲೆಸಲಿ. ಎಲ್ಲರ ಹೃದಯದಲ್ಲೂ ಶಾಂತಿ,
ದೈವಿಕ ಸಾಮರಸ್ಯ ಹಾಗೂ ಒಗ್ಗಟ್ಟು ನೆಲೆಸಲಿ.

ಇಲ್ಲಿರುವ ದೈವೀ ಶಕ್ತಿಗಳು, ದೈವಿಕ ಬೆಳಕು, ದೈವಿಕ ಶಕ್ತಿ,
ದೈವಿಕ ಪ್ರೀತಿ, ದೈವಿಕ ಕರುಣೆ, ದೈವಿಕ ದಯಾಳುತ್ವ, ದೈವಿಕ
ಪ್ರಜ್ಞೆ, ದೈವಿಕ ಜ್ಞಾನ, ಆಧ್ಯಾತ್ಮಿಕತೆ, ಮುಂತಾದವುಗಳನ್ನು ಪಡೆಯಲಿ.

ಈ ಸ್ಥಳದ ರಕ್ಷಕರು, ದೈವಿಕ ಮಾರ್ಗದರ್ಶನ, ಪರಿಶುದ್ಧ ಸೇವಾ
ಮನೋಭಾವ ಹಾಗೂ ಪ್ರಾಮಾಣಿಕತೆ ಮುಂತಾದವುಗಳನ್ನು
ಪಡೆಯಲಿ.
ಪರಮಾತ್ಮನೆ ವಂದನೆ, ವಂದನೆ, ವಂದನೆ.

Copyright © All rights reserved


# ಆಧ್ಯಾತ್ಮಿಕ ಸತ್ಯಪ್ರತಿಜ್ಞೆ

**ನಮ್ಮ ಆಧ್ಯಾತ್ಮಿಕ ಶಕ್ತಿಯನ್ನು ಹೆಚ್ಚಿಸಿ
ನಮ್ಮ ಉನ್ನತ ಆತ್ಮನೊಂದಿಗೆ
ಸಂಪರ್ಕವೇರ್ಪಡಿಸುವ ಸತ್ಯಪ್ರತಿಜ್ಞೆ.**

**www.pranaviolethealing.com**

Copyright © All rights reserved

ಈ ಸತ್ಯಪ್ರತಿಜ್ಞೆಯನ್ನು ಓದುವಾಗ ದೈವಿಕ ಅಗ್ನಿಯು ನಿಮ್ಮನ್ನು ಸುತ್ತುವರೆಯಲು ಅನುವು ಮಾಡಿಕೊಡಿ.

## ನಾನು ದೈವಿಕ ಅಗ್ನಿಯಾಗಿದ್ದೇನೆ,
## ನಾನು ಪರಮಾತ್ಮನ ಇಚ್ಚೆಯಂತೆ ಪವಿತ್ರವಾಗಿದ್ದೇನೆ

(೩ ನಿಮಿಷಗಳು ಅಥವಾ ಅದಕ್ಕಿಂತ ಹೆಚ್ಚಿನ ಕಾಲದವರೆಗೆ ಪಠಿಸಿರಿ.)

(ಈ ಎರಡು ವಾಕ್ಯಗಳನ್ನು ನೀವು ನಿಮ್ಮ ಗೃಹ, ಕಾರ್ಯಾಲಯ, ಹಳ್ಳಿ, ಪಟ್ಟಣ, ದೇಶ, ಮಕ್ಕಳು, ಪತಿ, ಪತ್ನಿ ಅಥವಾ ಬೇರೆ ಯಾವುದೇ ವ್ಯಕ್ತಿಗಾಗಿಯೂ ಓದಬಹುದು.

<u>ಉದಾಹರಣೆಗೆ:</u>
ನನ್ನ ಮನೆಯು ದೈವಿಕ ಅಗ್ನಿಯಾಗಿದೆ,
ನನ್ನ ಮನೆಯು ಪರಮಾತ್ಮನ ಇಚ್ಚೆಯಂತೆ ಪವಿತ್ರವಾಗಿದೆ)

ಪ್ರತಿಯೊಂದನ್ನು ೧ ನಿಮಿಷದವರೆಗೆ ಪಠಿಸಿರಿ

ಭೂಮಿ, ಆಕಾಶ ಮತ್ತು ಸಾಗರದ ಪ್ರಕೃತಿ ಜೀವಿಗಳು
ದೈವಿಕ ಅಗ್ನಿಯಾಗಿದ್ದಾರೆ,
ಭೂಮಿ, ಆಕಾಶ ಮತ್ತು ಸಾಗರದ ಪ್ರಕೃತಿ ಜೀವಿಗಳು
ಪರಮಾತ್ಮನ ಇಚ್ಚೆಯಂತೆ ಪವಿತ್ರರಾಗಿದ್ದಾರೆ.
(೧ ನಿಮಿಷ)

ಭೂಮಿ ತಾಯಿಯು ದೈವಿಕ ಅಗ್ನಿಯ ಗ್ರಹವಾಗಿದೆ,
ಭೂಮಿ ತಾಯಿಯು ಪರಮಾತ್ಮನ ಇಚ್ಚೆಯಂತೆ ಪವಿತ್ರವಾಗಿದೆ.
(೧ ನಿಮಿಷ)

ನಮ್ಮ ಚಂದ್ರ ದೈವಿಕ ಅಗ್ನಿಯಾಗಿದೆ,
ನಮ್ಮ ಚಂದ್ರ ಪರಮಾತ್ಮನ ಇಚ್ಚೆಯಂತೆ ಪವಿತ್ರವಾಗಿದೆ.
(೧ ನಿಮಿಷ)

ನಮ್ಮ ಸೂರ್ಯ ದೈವಿಕ ಅಗ್ನಿಯ ನಕ್ಷತ್ರವಾಗಿದೆ,
ನಮ್ಮ ಸೂರ್ಯ ಪರಮಾತ್ಮನ ಇಚ್ಚೆಯಂತೆ ಪವಿತ್ರವಾಗಿದೆ.
(೧ ನಿಮಿಷ)



## ನಾನು

ನಾನು ಈ ಭೌತಿಕ ಶರೀರವಲ್ಲ,
ನಾನು ನಾನೇ ಆಗಿದ್ದೇನೆ.
(7 ಸೆಕೆಂಡುಗಳವರೆಗೆ ಮೌನವಾಗಿರಿ)

ನಾನು ಈ ತಪ್ಪು ಭಾವನೆಗಳಲ್ಲ,
ನಾನು ನಾನೇ ಆಗಿದ್ದೇನೆ.
(7 ಸೆಕೆಂಡುಗಳವರೆಗೆ ಮೌನವಾಗಿರಿ)

ನಾನು ಈ ತಪ್ಪು ಆಲೋಚನೆಗಳಲ್ಲ,
ನಾನು ನಾನೇ ಆಗಿದ್ದೇನೆ.
(7 ಸೆಕೆಂಡುಗಳವರೆಗೆ ಮೌನವಾಗಿರಿ)

ನಾನು ಈ ಕದಡಿದ ಮನಸ್ಸಲ್ಲ,
ನಾನು ನಾನೇ ಆಗಿದ್ದೇನೆ.
(7 ಸೆಕೆಂಡುಗಳವರೆಗೆ ಮೌನವಾಗಿರಿ)

ನಾನು ಆತ್ಮ
ನನ್ನ ಶರೀರವು ನನ್ನ ಆತ್ಮದ ದೇಗುಲ
ನಾನು ದೈವದ ಕಿಡಿ
ಪರಮಾತ್ಮ ನನ್ನ ಸೃಷ್ಟಿಕರ್ತ
ನಾನು ಪರಮಾತ್ಮನಲ್ಲಿ ಒಂದಾಗಿದ್ದೇನೆ.

ದಿನದಿಂದ ದಿನಕ್ಕೆ ನಾನು ನನ್ನ ಕರ್ಮಗಳನ್ನು
ಸಮತೋಲನಗೊಳಿಸಿಕೊಳ್ಳುತ್ತಿದ್ದೇನೆ.
ನಾನು ಈ ದೈವಿಕ ಮಾರ್ಗದರ್ಶನ ಮತ್ತು
ಯೋಜನೆಯನ್ನು ಒಪ್ಪಿಕೊಂಡಿದ್ದೇನೆ.
ನನ್ನ ಶರೀರ, ಮನಸ್ಸು ಹಾಗೂ ಆತ್ಮ, ಪರಮಾತ್ಮನ
ಪರಿಪೂರ್ಣವಾದ ಸೃಷ್ಟಿಗಳಾಗಿವೆ.

ನಾನು ಪರಮಾತ್ಮನ ಪ್ರೀತಿಗೆ ಪಾತ್ರನಾದ ಪವಿತ್ರನು.
ನಾನು ಪರಮಾತ್ಮನ ಇಚ್ಚೆಯಂತೆ ಪವಿತ್ರನಾಗಿದ್ದೇನೆ.

ನಾನು ನಾನೇ ಆಗಿದ್ದೇನೆ. (೩ ಸಲ ಪಠಿಸಿರಿ)

ನಾನು ಪರಮಾತ್ಮನಲ್ಲಿ ಒಂದಾಗಿದ್ದೇನೆ.
ನಾನು ಎಲ್ಲರಲ್ಲೂ ಒಂದಾಗಿದ್ದೇನೆ.



## ನಾನು ಜ್ಯೋತಿ

ನಾನು ಜ್ಯೋತಿ, ನಾನು ಪ್ರಜ್ವಲಿಸುವ ಜ್ಯೋತಿ,
ಕಾಂತಿಕಾರಕ ಜ್ಯೋತಿ, ಪ್ರಖರವಾದ ಜ್ಯೋತಿ.

ಪರಮಾತ್ಮನು ನನ್ನಲ್ಲಿರುವ ಕತ್ತಲೆಯನ್ನು
ಜ್ಯೋತಿಯನ್ನಾಗಿ ಪರಿವರ್ತಿಸಿದ್ದಾನೆ.

ಇಂದು ನಾನು ಸೂರ್ಯನ ಕೇಂದ್ರಬಿಂದುವಾಗಿದ್ದೇನೆ.

ಮನುಷ್ಯನ ಭಾವನೆ ಹಾಗೂ ಆಲೋಚನೆಗೂ ಮೀರಿದ
ಪ್ರಕಾಶವು, ಬೆಳಕಿನ ಪುಂಜ ಹಾಗೂ ತಿಳಿಯಾದ
ಜೀವನದಿಯಂತೆ ನನ್ನೊಳಗೆ ಹರಿಯುತ್ತಿದೆ.

ನಾನು ದೈವಿಕತೆಯ ಬಾಹ್ಯರೂಪ.

ಶಕ್ತಿಯುತವಾದ ಪ್ರಕಾಶಮಯವಾದ ನದಿಯಾಗಿರುವ
ನಾನು, ನನ್ನನ್ನು ಸುತ್ತುವರೆದಿದ್ದ ಅಂಧಕಾರವನ್ನು
ನುಂಗಿದ್ದೇನೆ.
ನಾನು ಜ್ಯೋತಿ, ನಾನು ಜ್ಯೋತಿ, ನಾನು ಜ್ಯೋತಿ.

ನಾನು ಬೆಳಕಿನಲ್ಲಿ ಜೀವಿಸಿದ್ದೇನೆ
ನಾನು ಪ್ರಕಾಶದ ಪರಿಪೂರ್ಣ ಆಯಾಮ
ನಾನು ಪ್ರಕಾಶದ ಪವಿತ್ರವಾದ ಗುರಿ
ನಾನು ಜ್ಯೋತಿ, ನಾನು ಜ್ಯೋತಿ, ನಾನು ಜ್ಯೋತಿ.

ನಾನು ಪ್ರಕಾಶದ ಅಲೆಯಾಗಿ ಜಗತ್ತಿನೆಲ್ಲೆಡೆ
ಹರಿಯುತ್ತಿದ್ದೇನೆ.

ನಾನು ಸ್ವರ್ಗ ಸಾಮ್ರಾಜ್ಯದ ಉದ್ದೇಶವನ್ನು ಬಲಿಷ್ಠಗೊಳಿಸಿ,
ಶುಭ ಹಾರೈಸಿ, ಹೋದೆಡೆಗೆಲ್ಲ ಅದನ್ನು ಪಸರಿಸುತ್ತಿದ್ದೇನೆ.

ನಾನು ಜ್ಯೋತಿ, ನಾನು ಜ್ಯೋತಿ, ನಾನು ಜ್ಯೋತಿ.